## ‘ಜಾನಕಿ’ ಮಾದರಿ ಆಗಲಿ

ಮಗಳು ಜಾನಕಿ ಕೂಡ ಸಿದ್ಧ ಮಾದರಿಯಲ್ಲಿ ಸಾಗಿದ್ದರೂ ಮಧ್ಯದಲ್ಲಿ ಅದ್ಭುತ ಕಂತುಗಳು ವೀಕ್ಷಕರ ಕುತೂಹಲವನ್ನು ಉಳಿಸಿಕೊಂಡು ಯಶಸ್ವಿ ಹಾದಿಯಲ್ಲಿ ಸಾಗುತ್ತಿರುವುದು ಸಂತೋಷ. ಜಾನಕಿ, ನಿರಂಜನ ಮತ್ತು ಆನಂದ ಇವರ ಮಧ್ಯದ ಸಂಬಂಧಗಳಲ್ಲಿ ಸೂಕ್ಷ್ಮ ಪದರಗಳನ್ನು ಗುರುತಿಸುತ್ತ ಇಂದು ಪ್ರೀತಿ–ಪ್ರೇಮ ಎಂದು ದುರಂತ ತಂದುಕೊಳ್ಳುತ್ತಿರುವ ಯುವಜನಾಂಗಕ್ಕೆ ಹೊಸ ಸಂದೇಶ ನೀಡುತ್ತಿವುದು ಗಮನ ಸೆಳೆಯುತ್ತದೆ.

ಆನಂದ, ಜಾನಕಿ ಪ್ರೇಮ ಸಹಜ. ಆದರೆ, ಪರಿಸ್ಥಿತಿಗೆ ಸಿಲುಕಿ ನಿರಂಜನನ್ನು ಮದುವೆ ಆಗಿ, ನಂತರ ಕೆಲವು ಕಷ್ಟಕರ ಮಜಲುಗಳನ್ನು ದಾಟಿ ಈಗ ಅವನ ಜಾನಕಿ ಬಗ್ಗೆ ತೋರುತ್ತಿರುವ ಅನುಕಂಪ ಮತ್ತು ಅವಳಿಂದ ದೂರವಾಗುತ್ತಿರುವ ಆನಂದನ ಮನಸ್ಥಿತಿ ಅವಲೋಕಿಸಿದಾಗ ಪ್ರೀತಿ–ಪ್ರೇಮ ಭ್ರಮೆ ಅನಿಸುತ್ತದೆ. ನಿಜ ಜೀವನದ ಅನಾವರಣವೇ ಬೇರೆ ಎನ್ನುವುದನ್ನು ನಿರ್ಲಿಪ್ತ ಪ್ರೀತಿಯಿಂದ ತೆರೆಯ ಮೇಲೆ ತಂದಿರುವ ಸೀತಾರಾಂ ಅವರ ಸೃಜನಾತ್ಮಕ ಕಲಾವಂತಿಕೆ ತುಂಬ ಸೊಗಸಾಗಿದೆ.

–ಸತ್ಯಬೋಧ, ಬೆಂಗಳೂರು

ಚೆನ್ನಾಗಿದೆ: ‘ಜಾನಕಿ’ ಚೆನ್ನಾಗಿದ್ದು, 9.30ಕ್ಕೆ ವೀಕ್ಷಕರನ್ನು ಟೀವಿ ಮುಂದೆ ಕೂಡಲು ಸೆಳೆದು ತರುತ್ತದೆ. ಶೀರ್ಷಿಕೆ ಗೀತೆಯು ಅರ್ಥಗರ್ಭಿತವಾಗಿದೆ.

–ಎಸ್. ವಿಜಯಕುಮಾರಿ, ಬೆಂಗಳೂರು

## ಕಥೆ ಉತ್ಪಾದಿಸುವ ಕಾರ್ಖಾನೆ

ಸಾಮಗ್ರಿಗಳನ್ನು ಉತ್ಪಾದಿಸುವ ಕಾರ್ಖಾನೆಗಳನ್ನು ನೋಡಿದ್ದೇವೆ. ಕಥೆಗಳನ್ನು ಉತ್ಪಾದಿಸುವ ಕಾರ್ಖಾನೆಗಳು ಇವೆಯಾ? ಎಂಬ ಗುಮಾನಿ ಧಾರಾವಾಹಿಗಳನ್ನು ನೋಡಿದಾಗ ಅನ್ನಿಸುತ್ತದೆ. ಒಮ್ಮೆ ಪ್ರೀತಿಸುತ್ತಾರೆ, ಮತ್ತೊಮ್ಮೆ ದ್ವೇಷಿಸುತ್ತಾರೆ ಉದಾ: ‘ರಾಧಾ ರಮಣ’ ‘ಬ್ರಹ್ಮಗಂಟು’ ‘ಸೀತಾವಲ್ಲಭ’ ‘ಅಗ್ನಿಸಾಕ್ಷಿ’ ಇನ್ನೂ ಹೆಸರಿಸಬಹುದು. ಎಲ್ಲಾ ಒಂದೇ ಚೌಕಟ್ಟಿನ ಕಥೆ ಹೊಂದಿರುತ್ತವೆ. ‘ಮಗಳು ಜಾನಕಿ’ ಒಂದು ರೀತಿಯ ಭಿನ್ನ ಎನ್ನಬಹುದು.

–ಎನ್.ಎಸ್.ಚಂದ್ರಶೇಖರ್ ಬೆಂಗಳೂರು.

ವಾರದ ಪತ್ರ

## ಮೂಢನಂಬಿಕೆಗೆ ಕುಮ್ಮಕ್ಕು!

‘ಮನೆ ಯಜಮಾನಿಯನ್ನು ಯಾರೂ ಮುಟ್ಟಬಾರದು. ಮುಟ್ಟಿದರೆ ವ್ರತ ಕೆಡುತ್ತದೆ. ಮಡಿಯಲ್ಲಿದ್ದವರು ಮಾತ್ರ ಮುಟ್ಟಬೇಕು’ ಹೀಗೆ ದೇವಸ್ಥಾನದ ಧರ್ಮದರ್ಶಿಗಳು ಅಖಿಲಾಂಡೇಶ್ವರಿಯ ಮನೆಮಂದಿಗೆ ಝೀ ಕನ್ನಡದ ‘ಪಾರು’ ಫೆ. 21ರ ಕಂತಿನಲ್ಲಿ ಆಜ್ಞಾಪಿಸುತ್ತಾರೆ.

ಇಲ್ಲಿ ವ್ರತಧಾರಿ ಅಖಿಲಾಂಡೇಶ್ವರಿ ವ್ರತದ ಸಲುವಾಗಿ ದೇವರಿಗೆ ಅರ್ಪಿಸುವ ಕಲಶವನ್ನು ತಲೆಯಲ್ಲಿ ಹೊತ್ತು ಸಾಗುತ್ತಿರುತ್ತಾಳೆ. ಇನ್ನೇನು ಅದನ್ನು ತಲೆಯಿಂದ ಕೆಳಗಿಳಿಸಬೇಕೆನ್ನುವಷ್ಟರಲ್ಲಿ ಪೂಜಾರಿ ಕಣ್ಣುಮುಚ್ಚಿ ದೇವರ ಸ್ಮರಣೆ ಮಾಡಲು ತಿಳಿಸುತ್ತಾರೆ. ಎಲ್ಲರೂ ಕಣ್ಣುಮುಚ್ಚಿ ಧ್ಯಾನದಲ್ಲಿದ್ದ ಹೊತ್ತು ಸರ್ಪವೊಂದು ಸರಿದು ಬಂದು ಅಖಿಲಾಂಡೇಶ್ವರಿಯ ಪಾದಕ್ಕೆ ಕಚ್ಚುತ್ತದೆ. ಮಡಿಸ್ನಾನ ಮಾಡಿ ಆಗ ತಾನೇ ಬಂದ ಪಾರು ಮಾತ್ರ ಈ ಘಟನೆಯನ್ನು ಗಮನಿಸಿ ‘ಅಮ್ಮಾ’ ಎಂದು ಕಿರುಚಿ ಹಾವು ಕಚ್ಚಿದ ವಿಷಯ ತಿಳಿಸಿದಾಗ ಧರ್ಮದರ್ಶಿಗಳು ಆ ವಾಕ್ಯ ಉವಾಚಿಸುತ್ತಾರೆ.

ಏನೇ ಆದರೂ ವ್ರತ ಮುಗಿಯುವವರೆಗೆ ಕಲಶವನ್ನು ತಲೆಯಿಂದ ಕೆಳಗಿಳಿಸಬಾರದೆಂದೂ, ಹಾಗೇನಾದರೂ ಮಾಡಿದರೆ ಅವರ ಕುಟುಂಬಕ್ಕೆ ಕಂಟಕ ತಪ್ಪಿದ್ದಲ್ಲವೆಂದೂ ಧರ್ಮದರ್ಶಿಗಳು ಪುನರುಚ್ಚರಿಸುತ್ತಾರೆ!

ಕಚ್ಚುವ ಮುನ್ನ ಸರ್ಪವು ವ್ರತಧಾರಿಯನ್ನು ಮುಟ್ಟಿರುತ್ತದೆ. ಅದರಿಂದ ವ್ರತ ಭಂಗವಾಗುವುದಿಲ್ಲವೆ?

ಹಾವು ಕಚ್ಚಿರುವುದೇ ಒಂದು ಮಹಾಕಂಟಕವಾಗಿರುವಾಗ ವ್ರತಭಂಗವಾಗುವುದರಿಂದ ಒದಗುವ ಕಂಟಕವೇನು ಮಹಾ? ವಾಸ್ತವದಿಂದ ದೂರವಾದ ಇಂತಹ ವಿಷಯಗಳನ್ನು ಮೂಢನಂಬಿಕೆಯನ್ನು ಹೆಚ್ಚಿಸುತ್ತದೆ.

–ರಮಣ್ ಶೆಟ್ಟಿ ರೆಂಜಾಳ್ ಮುಂಬೈ

## ಚಂದದ ಚಂದನ

‘ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಸಿಕ್ತು’ ಅನ್ನೊ ಹಂಗೆ ಚಂದನ ವಾಹಿನಿ ನಿರಾಳವಾಗಿ ಉಸಿರಾಡುವಂತಾಯಿತು. ಟೀವಿಲೋಕದಲ್ಲಿ ಕರೆಯದೇ ಬಂದ ಅಭ್ಯಾಗತರು, ಖಾಸಗಿ ವಾಹಿನಿಗಳೆಲ್ಲ ನಿದ್ದೆಗೆ ಜಾರಿವೆ. ತಾವೇ ನಿದ್ದೆ ಮಾತ್ರೆ ನುಂಗಿ ವೀಕ್ಷಕರ ತಲೆನೋವು ಕಡಿಮೆ ಮಾಡಿವೆ. ಆ ಧಾರಾವಾಹಿ ಮುಗಿಸಿ, ಈ ಧಾರಾವಾಹಿ ಮುಗಿಸಿ ಎಂದು ಬೊಬ್ಬೆ ಹೊಡೆದರೂ ಅವು ಇನ್ನಷ್ಟು ಎಳೆದೂ ಎಳೆದು ಹೇಸಿಗೆ ಹುಟ್ಟುವಂತೆ ಮಾಡಿವೆ. ಏಕೈಕ ವಾಹಿನಿ ಚಂದನ ಸುಗಂಧ ಬೀರುತ್ತಿದೆ. ‘ಮಧ್ಯದಲ್ಲಿ ಬಂದಿದ್ದು, ಮಧ್ಯದಲ್ಲೇ ಬಿಟ್ಹೋಯ್ತು’ ಅನ್ನುವ ಹಾಗೆ ಆಗಿದೆ.

–ರತ್ನ ಅಶೋಕ ಗೊರವರ, ಧಾರವಾಡ

## ಕೊನೆಗೊಳ್ಳಬಾರದಿತ್ತು

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಶ್ರೀ ವಿಷ್ಣು ದಶಾವತಾರ’ ಧಾರಾವಾಹಿಯಲ್ಲಿ ನರಸಿಂಹ ಅವತಾರದವರೆಗಿನ ಕಥೆ ಪ್ರಸಾರವಾಗಿ ನಂತರದ ವಾಮ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಅವತಾರಗಳನ್ನು ವಿವರವಾಗಿ ಕಾಣಬಹುದೆಂಬ ನಿರೀಕ್ಷೆಯಲ್ಲಿದ್ದಾಗಲೇ ನಾರದರ ಮೂಲಕ ಈ ಅವಕಾಶಗಳ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿ ಮುಗಿಸಿದ್ದಾರೆ. ಹೀಗೆ ಮಾಡಿದ್ದರಿಂದ ನಮ್ಮಂತಹ ಹಲವು ವೀಕ್ಷಕರಿಗೆ ನಿರಾಶೆಯುಂಟಾಗಿರಬಹುದು. ಈ ದಿಢೀರ್ ಮುಕ್ತಾಯಕ್ಕೆ ಕಾರಣವಾದರೂ ಏನಿರಬಹುದು?

–ಗೀತಾ ಶ್ರೀನಾಥ್, ಜಯತೀರ್ಥ, ಪದ್ಮಶ್ರೀ ತುಮಕೂರು,
ಎ.ಪಿ. ರಂಗನಾಥ ಮೈಸೂರು, ಹೇಮಂತ ಗಾಂವಕರ, ಬೆಂಗಳೂರು

## ಬೇಲಿಯೇ ಹೊಲ ಮೇಯ್ದಂತೆ

ಶೀರ್ಷಿಕೆ ಪ್ರಧಾನ ‘ಕಮಲಿ’ ಧಾರಾವಾಹಿಯಲ್ಲಿ ಶೀರ್ಷಿಕೆಯನ್ನು ಬಲಗೊಳಿಸುವುದು ಬಿಟ್ಟು ದುರ್ಬಲಗೊಳಿಸಲಾಗಿದೆ. ಬೇಲಿಯೇ ಎದ್ದು ಮೇಯ್ದಂತಾಗಿದೆ. ಶೀರ್ಷಿಕೆ ಪಾತ್ರದಾರಿ ಕಮಲಿ ಯಾವ ತಪ್ಪು ಮಾಡದ ನಾಯಕನ ಕಪಾಳಕ್ಕೆ ಹೊಡೆಯುವುದು, ಕೊಲೆ ಅಪಾದನೆ ಹೊರಿಸುವುದರ ಮೂಲಕ ಪಾತ್ರವನ್ನೇ ದುರ್ಬಲಗೊಳಿಸಲಾಗಿದೆ. ಅತ್ತೂ ಅತ್ತೂ ನಾಯಕಿ ಜ್ವರ ಬಂದವಳಂತೆ ಕಾಣುತ್ತಾಳೆ. ಪ್ರತಿ ನಾಯಕಿ ಅನಿತಾಳನ್ನು ವಿಜೃಂಭಿಸಲಾಗುತ್ತಿದೆ. ಆಕೆ ಪೋಲಿ ಪಟಾಲಂ ಕಟ್ಟಿಕೊಂಡು ಉತ್ತಮವಾಗಿ ನಟಿಸುತ್ತಿದ್ದಾಳೆ. ‘ಶಾಂತ ಪಾಪಂ’ ಆಗಿದ್ದರೆ ಶಂಬು ಕೊಲೆ ಪ್ರಯತ್ನವನ್ನು ಪೊಲೀಸರೇ ಪತ್ತೆ ಹಚ್ಚುತ್ತಿದ್ದರು. ಇಲ್ಲಿ ಕೋರ್ಟಿಗೆ ಎಳೆಯಲಾಗಿದೆ.

–ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಮಹಿಳೆಯೇ ವಿಲನ್

ಎಲ್ಲಾ ಸಾಮಾಜಿಕ ಧಾರಾವಾಹಿಗಳಲ್ಲಿ ಸ್ತ್ರೀ ಪಾತ್ರಗಳೇ ವಿಲನ್ ಆಗಿರುತ್ತವೆ. ಅವರ ಕೈಲಾಗದ್ದನ್ನು ರೌಡಿಗಳು ಮಾಡುತ್ತಾರೆಂದು ಅವರಿಗೆ ಲಕ್ಷಾಂತರ ರೂಪಾಯಿಗಳನ್ನು ಹಫ್ತಾ ನೀಡುತ್ತಾರೆ. ರೌಡಿಗಳು ಯಾವುದೇ ಕೆಲಸ ಮಾಡದೇ ಕಾಲ ತಳ್ಳುತ್ತ ಇರುತ್ತಾರೆ. ಇದು ನಿರ್ದೇಶಕರು ಮಾಡಿರುವ ಕುತಂತ್ರ. ರೌಡಿಗಳಿಗೆ ಯಾವುದೇ ಬುದ್ಧಿಶಕ್ತಿ ಇರುವುದಿಲ್ಲ. ಸಾಹಸವನ್ನೂ ತೋರುವುದಿಲ್ಲ. ಇಂತಹವರನ್ನು ನೇಮಿಸಿಕೊಳ್ಳುವವರು ಎಂತಹ ಬುದ್ಧಿವಂತರು? ಇದರ ಕುರಿತು ಯೋಚಿಸುವರೆ?

–ಎನ್.ಸಿ. ಸುಬ್ಬರಾವ್ ದಾವಣಗೆರೆ